## <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ಜಮಖಂಡಿ</u>

<u>ಸಿ ಸಿ ನಂ.**1/2021**</u>

| | | |
|---|---|---|
| ಆರೋಪಿಯ ಹೆಸರು | : | ಸುಭಾಶ್ಚಂದ್ರ ಬನಸೊಡೆ |
| ತಂದೆಯ ಹೆಸರು | : | ಶಿವಣ್ಣ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಸರಕಾರಿ ನೌಕರ |
| ವಾಸಸ್ಥಳ | : | ಜಮಖಂಡಿ |

### <u>ಭಾ.ದಂ. ಪ್ರ.ಸಂ. ಕಲಂ.**313** ರಡಿಯಲ್ಲಿ ಆರೋಪಿತನ ಹೇಳಿಕೆ</u>

ಪ್ರ.1) ಈ ಪ್ರಕರಣದಲ್ಲಿ ಸಾಕ್ಷಿದಾರರು ಹೇಳಿರುವುದನ್ನು ಕೇಳಿ ತಿಳಿದುಕೊಂಡಿದ್ದೀರಾ ?

ಉ:- ಕೇಳಿದ್ದೇನೆ.

ಪ್ರ.2) ಪ್ರಾ.ಸಾ-1– ಅಮರೇಶ ಗಜಾನನ ಪಲ್ಲೇದ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿನಾಂಕ 15-03-2018 ರಂದು ತನ್ನನ್ನು ಜಮಖಂಡಿಯ ಕ್ಷೇತ್ರಶಿಕ್ಷಣಾಧಿಕಾರಿಗಳ ಕಾರ್ಯಾಲಯಕ್ಕೆ ಕರೆದಿದ್ದು, ಅಲ್ಲಿ ಚಾಸಾ-2 ಮತ್ತು ಚಾಸಾ-1 ರವರು ಹಾಜರಿದ್ದು, ಆರೋಪಿಯಾದ ನೀವು ಚಾಸಾ-1 ರವರ ಎದುರಿಗಿನ ಕುರ್ಚಿಯಲ್ಲಿ ಕುಳಿತು ಕೆಲಸ ಮಾಡುವಾಗ ಹಣವನ್ನು ದುರ್ಬಳಕೆ ಮಾಡಿರುವುದಾಗಿ ಚಾಸಾ-1 ತನಗೆ ಹೇಳಿದ್ದು, ಅದಕ್ಕಾಗಿ ಸದರಿ ಜಾಗೆಯಲ್ಲಿ ಪೋಲಿಸರು ಮಹಜರ ಮಾಡಿದ್ದಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.3) ಪ್ರಾ.ಸಾ-2– ಶಿವನಗೌಡ ಬಸನಗೌಡ ಬಿರಾದಾರ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿನಾಂಕ 15-03-2018 ರಂದು ತನ್ನನ್ನು ಜಮಖಂಡಿಯ ಕ್ಷೇತ್ರಶಿಕ್ಷಣಾಧಿಕಾರಿಗಳ ಕಾರ್ಯಾಲಯಕ್ಕೆ ಕರೆದಿದ್ದು, ಅಲ್ಲಿ ಚಾಸಾ-1 ಮತ್ತು ಚಾಸಾ-3 ರವರು ಹಾಜರಿದ್ದು, ಗುನ್ನಾ ಜಾಗೆಯ ಬಾಗಿಲು ಪೂರ್ವಕ್ಕೆ ಮುಖ ಮಾಡಿ ಇದ್ದು, ಕಟ್ಟಡ ಆಯತ್ ಆಕಾರದಲ್ಲಿ ಇತ್ತು. ಆರೋಪಿಯಾದ ನೀವು ನೈರುತ್ಯ ದಿಕ್ಕಿನಲ್ಲಿ ಕುಳಿತುಕೊಳ್ಳುತ್ತಿದ್ದು, ನೀವು ಹಣ ದುರ್ಬಳಕೆ ಮಾಡಿ ಬೇರೆ ಖಾತೆಗೆ ಜಮೆ ಮಾಡಿದ್ದಕ್ಕೆ ಸಂಬಂಧಪಟ್ಟಂತೆ ಪೋಲಿಸರು ಸ್ಥಳದಲ್ಲಿ ಮಹಜರ ಮಾಡಿದ್ದು, ಅದಕ್ಕೆ ತಾನು ಸಹಿ

ಹಾಕಿರುವುದಾಗಿ ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.4) ಪ್ರಾ.ಸಾ-3– ಶ್ರೀಶೈಲ ಶಿವಪ್ಪ ಗಾಣಗಿ, ಅಧೀಕ್ಷಕರು, ಕ್ಷೇತ್ರ ಶಿಕ್ಷಣ ಕಾರ್ಯಾಲಯ, ಜಮಖಂಡಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ಆರೋಪಿ ತಮ್ಮ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರು ಅಂತಾ ವೇತನ ಬಟವಡೆ ಮತ್ತು ನ್ಯಾಯಾಲಯದ ಪ್ರಕರಣಗಳ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿಃ 28-02-2017 ರಂದು ಚಾಸಾ-1 ರವರು ತನಗೆ ಮತ್ತು ಬಸಯ್ಯ ಮಠ ಇವರಿಗೆ ಆರೋಪಿ ಮಾಡಿದಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪರಿಶೀಲನೆ ಮಾಡಲು ಸೂಚಿಸಿದ್ದರು ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.5) ಪ್ರಾ.ಸಾ-3– ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ಆರೋಪಿ ದಿನಾಂಕ 27-12-2017 ರಂದು 15 ಜನ ಶಿಕ್ಷಕರ ಗಳಿಕೆ ರಜೆ ನಗದೀಕರಣ ಬಿಲ್ಲುಗಳನ್ನು ತಯಾರಿಸಿ ಚಾಸಾ-1 ರವರ ಸಹಿ ಪಡೆದು ಖಜಾನೆಗೆ ಸಲ್ಲಿಸಿದ್ದು, ದಿನಾಂಕ 28-12-2017 ರಂದು ಖಜಾನೆಯಿಂದ ಬಂದ ಚೆಕ್ಕುಗಳಿಗೆ ವೇತನ ವಿತರಣಾ ಪಟ್ಟಿಯನ್ನು ತಯಾರಿಸುವಾಗ 11 ಜನ ಶಿಕ್ಷಕರ ಖಾತೆಗೆ ಮತ್ತು ಅವರ ವೈಯಕ್ತಿಕ ಖಾತೆಗೆ ಜಮಾ ಮಾಡಿದ್ದು, ಜಮೆ ಮಾಡಿದ ಶಿಕ್ಷಕರಿಂದ ನಿಮ್ಮ ಖಾತೆಗೆ ನನ್ನ ಹಣ ಜಮೆ ಆಗಿದೆ, ಅದನ್ನು ಮರಳಿ ಕೊಡಿ ಎಂದು ಕೇಳಿದಾಗ ಸದರಿ ಶಿಕ್ಷಕರು ಹಣವನ್ನು ಆರೋಪಿಗೆ ಕೊಟ್ಟಿದ್ದು, ಈ ಕುರಿತು ಆರೋಪಿಯನ್ನು ವಿಚಾರಿಸಿದಾಗ ತಪ್ಪನ್ನು ಒಪ್ಪಿಕೊಂಡಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.6) ಪ್ರಾ.ಸಾ-3– ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ಒಟ್ಟು ರೂ.3,11,118/-ಗಳ ಬಿಲ್ಲು ಮಾಡಿ ಹಣವನ್ನು ತೆಗೆದುಕೊಂಡಿದ್ದು, ಸದರಿ ಹಣವನ್ನು ಬೇರೆ ಬೇರೆ ಶಿಕ್ಷಕರ ಖಾತೆಗೆ ಜಮಾ ಮಾಡಿದ್ದು, ದಿನಾಂಕ 28-02-2018 ರಂದು ಆರೋಪಿ ಅರ್ಹ ಶಿಕ್ಷಕರ ಖಾತೆಗೆ ರೂ.2,58,228/- ಗಳನ್ನು ಚೆಕ್ ಮುಖಾಂತರ ಮರಳಿ ಜಮಾ ಮಾಡಿದ್ದಾರೆ ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.7) ಫ್ರಾ.ಸಾ-4– ಚಂದ್ರಶೇಖರ ಪರಯ್ಯ ಹಿರೇಮಠ, ಶಿಕ್ಷಕರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- 2018 ನೇ ಸಾಲಿನಲ್ಲಿ ತಾನು ಗಳಿಕೆ ರಜೆ ನಗದೀಕರಣಕ್ಕೆ ಅರ್ಜಿ ಕೊಟ್ಟಿದ್ದು, ಸದರಿ ಗಳಿಕೆ ರಜೆ ನಗದೀಕರಣದ ಹಣ ರೂ.16,301/- ಗಳು ತನ್ನ ಖಾತೆ ನಂ.30343653923 ಗೆ ಜಮೆ ಆಗಿದ್ದು, ಆ ಬಗ್ಗೆ ತನ್ನ ಮೊಬೈಲಗೆ ಮೆಸೇಜ್ ಬಂದಿದೆ ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.8) ಫ್ರಾ.ಸಾ-5– ಶೆಟ್ಟೆಪ್ಪ ಯಲ್ಲಪ್ಪ ಮಾದರ, ಶಿಕ್ಷಕರು ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿ:12-01-2018 ರಂದು ತನ್ನ ಖಾತೆ ನಂ.30343134827 ಕ್ಕೆ ರೂ.20,000/-ಗಳನ್ನು ಹಾಕಿದ್ದು, ಆರೋಪಿ ತನಗೆ ಫೋನ್ ಮಾಡಿ ತನ್ನ ತಾಯಿಗೆ ಆರೋಗ್ಯ ಸರಿ ಇಲ್ಲ, ನನ್ನ ತಮ್ಮ ಮುಂಬೈನಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಸದರಿಯವನು ನನ್ನ ಖಾತೆಗೆ ಹಣ ಹಾಕುವುದಾಗಿ ತಿಳಿಸಿದ್ದ ಎಂದು ಹೇಳಿದಾಗ, ತಾನು ತನ್ನ ಖಾತೆಗೆ ಜಮೆಯಾದ ರೂ.20,000/-ಗಳನ್ನು ಆರೋಪಿಗೆ ಕೊಟ್ಟಿದ್ದು, ಒಟ್ಟು 12 ಜನಕ್ಕೆ ಈ ರೀತಿ ಆಗಿತ್ತು ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.9) ಫ್ರಾ.ಸಾ-6– ನಾಗಪ್ಪ ಭೀಮಣ್ಣ ಮಾಲಗಾರ, ಸಹಶಿಕ್ಷಕ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿ:12-01-2018 ರಂದು ತನ್ನ ಖಾತೆ ನಂ.11127278698 ಕ್ಕೆ ರೂ.25,000/-ಗಳು ಜಮಾ ಆಗಿದ್ದು, ಮಾರನೇ ದಿನ ಆರೋಪಿ ತನಗೆ ಫೋನ್ ಮಾಡಿ, ತನ್ನ ತಾಯಿಗೆ ಆರೋಗ್ಯ ಸರಿ ಇಲ್ಲ, ತನ್ನ ಹಣ ತಪ್ಪಿ ನಿಮ್ಮ ಖಾತೆಗೆ ಜಮಾ ಆಗಿದ್ದು, ತನ್ನ ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾಗಿದೆ, ಹಣ ತೆಗೆದುಕೊಡಿ ಎಂದು ಕೇಳಿದ್ದರಿಂದ ತಾನು ಹಣವನ್ನು ತೆಗೆದುಕೊಟ್ಟಿದ್ದು, ಈ ವಿಷಯ ತಾಲೂಕಿನ ತುಂಬಾ ಹರಡಿದ್ದು, ಈ ರೀತಿ 11 ಜನ ಶಿಕ್ಷಕರಿಗೆ ಹಣ ಜಮಾ ಆಗಿದೆ ಎಂದು ಗೊತ್ತಾಯಿತು ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.10) ಫ್ರಾ.ಸಾ-6– ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ನಂತರ ತಾವೆಲ್ಲರೂ ಚಾಸಾ-1 ರವರನ್ನು ಭೇಟಿಯಾಗಿ ನಡೆದ ವಿಷಯವನ್ನು ಹೇಳಿದಾಗ,

ಚಾಸಾ-1 ರವರು ಚಾಸಾ-4 ಮತ್ತು ಬಿ.ಸಿ. ಮಠ ಇವರಿಗೆ ಪರಿಶೀಲನೆ ಮಾಡಲು ತಿಳಿಸಿದ್ದು, ಸದರಿಯವರು ದಾಖಲಾತಿಗಳನ್ನು ಪರಿಶೀಲನೆ ಮಾಡಿದಾಗ, ಆರೋಪಿ ಶಿಕ್ಷಕರಿಂದ ಗಳಿಕೆ ರಜೆಯ ನಗದೀಕರಣಕ್ಕಾಗಿ ಅರ್ಜಿಯನ್ನು ಪಡೆಯದೇ, ಬಾಕಿ ಹಣದ ಬಿಲ್ಲನ್ನು ಎಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ಲೆಕ್ಕ ಹಾಕಿ ಜನರೇಟ್ ಮಾಡಿ, ಜಮಖಂಡಿ ಟ್ರೆಜರಿಗೆ ಕಳುಹಿಸಿಕೊಟ್ಟಿದ್ದಾರೆ ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.11) ಪ್ರಾ.ಸಾ-6– ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ಚಾಸಾ-1 ರವರು ಕೆಲಸದ ಒತ್ತಡದಲ್ಲಿದ್ದಾಗ ಆರೋಪಿ ಅವರ ಸಹಿಯನ್ನು ತೆಗೆದುಕೊಂಡಿದ್ದು, ಗಳಿಕೆ ರಜೆಯ ರೂ.58,887/- ಮತ್ತು ರೂ.2,88,000/- ಚಿಲ್ಲರೆ ಹಣವನ್ನು ಶಿಕ್ಷಕರ ಖಾತೆಗೆ ಜಮೆ ಮಾಡಿದ್ದು, ಸದರಿ ಹಣವನ್ನು ಆರೋಪಿ ತೆಗೆದುಕೊಂಡು ಸರಕಾರಕ್ಕೆ ದ್ರೋಹ ಮಾಡಿ ದುರುಪಯೋಗಪಡಿಸಿಕೊಂಡಿದ್ದಾರೆ. ಈ ಕುರಿತು ತಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.12) ಪ್ರಾ.ಸಾ-7– ರಾಜೇಶ್ವರಿ ಬಸಲಿಂಗಪ್ಪ ಗುಳೇದಗುಡ್ಡ, ಶಿಕ್ಷಕಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿಃ 12-01-2018 ರಂದು ರೂ.19,639/-ಗಳು ತನ್ನ ಖಾತೆಗೆ ಜಮಾ ಆಗಿದ್ದು, ನಂತರ ಆರೋಪಿ ತನಗೆ ಫೋನ್ ಮಾಡಿ ತನ್ನ ತಾಯಿಗೆ ಆರೋಗ್ಯ ಸರಿ ಇಲ್ಲದ್ದರಿಂದ ನನ್ನ ಸಂಬಂಧಿಕರು ನಿಮ್ಮ ಖಾತೆಗೆ ಹಣವನ್ನು ಹಾಕಿದ್ದಾರೆ, ಅದನ್ನು ಮರಳಿ ಅವರ ಖಾತೆಗೆ ಹಾಕಲು ಹೇಳಿದ್ದರಿಂದ, ತಾನು ಸದರಿ ಹಣವನ್ನು ಆರೋಪಿ ಖಾತೆಗೆ ಹಾಕಿದ್ದು, 10-12 ಶಿಕ್ಷಕರಿಗೆ ಅದೇ ರೀತಿ ಆರೋಪಿ ಹೇಳಿದ್ದಾನೆಂದು ಗೊತ್ತಾಗಿದ್ದು, ನಂತರ ತನಗೆ ಬಿಇಓ ಕಚೇರಿಯಿಂದ ಫೋನ್ ಬಂದಿದ್ದು, ಎಲ್ಲ ಶಿಕ್ಷಕರು ಸೇರಿ ದೂರನ್ನು ಕೊಟ್ಟಿರುವುದಾಗಿ ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.13) ಪ್ರಾ.ಸಾ-8)– ಭಗವಾನ್ ಸಂತು ಜೋರಾಪೂರ, ಶಿಕ್ಷಕರು ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿಃ12-01-2018 ರಂದು ಆರೋಪಿ ತನ್ನ ಖಾತೆಗೆ

ರೂ.20,000/-ಗಳನ್ನು ಜಮೆ ಮಾಡಿದ್ದು, ನಂತರ ಆರೋಪಿ ತನಗೆ ಫೋನ್ ಮಾಡಿ ನನ್ನ ಸಂಬಂಧಿಕರು ನಿಮ್ಮ ಖಾತೆಗೆ ಹಣ ಹಾಕಿದ್ದು, ಅದನ್ನು ಮರಳಿ ಕೊಡಲು ಹೇಳಿದ್ದರಿಂದ, ತಾನು ಹಣವನ್ನು ತೆಗೆದು ಆರೋಪಿಗೆ ಕೊಟ್ಟಿದ್ದು, ಆರೋಪಿ ಎಲ್ಲರ ಕಡೆಯಿಂದ ಹಣ ತೆಗೆದುಕೊಳ್ಳುತ್ತಿದ್ದಾನೆ ಎಂದು ಕೇಳಿ ಗೊತ್ತಾಗಿದೆ ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.14) ಪ್ರಾ.ಸಾ-9– ಪುಂಡಲೀಕ ಮಲ್ಲಾರಿ ಮಸುತಿ, ಸಹಶಿಕ್ಷಕ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- 2018 ರಲ್ಲಿ ಆರೋಪಿ ತನ್ನ ತಾಯಿಗೆ ಆರೋಗ್ಯ ಸರಿ ಇಲ್ಲದ್ದರಿಂದ, ನನ್ನ ಸಂಬಂಧಿಕರು ನಿಮ್ಮ ಖಾತೆಗೆ ರೂ.20,000/- ಮತ್ತು ರೂ.25,000/-ಗಳನ್ನು ಹಾಕಿದ್ದು ಅದನ್ನು ಮರಳಿ ಕೊಡಲು ಹೇಳಿದ್ದರಿಂದ, ತಾನು ಒಟ್ಟು ರೂ.45,000/-ಗಳನ್ನು ತೆಗೆದು ಆರೋಪಿಗೆ ಕೊಟ್ಟಿರುತ್ತಾರೆ. ನಂತರ ಎಲ್ಲಾ ಶಿಕ್ಷಕರನ್ನು ಕಚೇರಿಯಲ್ಲಿ ಕರೆಸಿ ವಿಚಾರಣೆ ಮಾಡಿದ್ದು, ದಿಃ 03-03-2018 ರಂದು ಚಾಸಾ-1 ರವರು ಆರೋಪಿ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದರು ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.15) ಪ್ರಾ.ಸಾ-10– ಗಂಗಾರಾಮ ಚೋಕು ರಾಠೋಡ, ಸಹಶಿಕ್ಷಕ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ಆರೋಪಿ ತನ್ನ ತಾಯಿಗೆ ಆರೋಗ್ಯ ಸರಿ ಇಲ್ಲ, ನನ್ನ ಸಂಬಂಧಿಕರು ನಿಮ್ಮ ಖಾತೆಗೆ ಹಣ ಹಾಕಿದ್ದು, ಅದನ್ನು ತೆಗೆದುಕೊಡಿ ಎಂದು ಹೇಳಿದ ವಿಷಯ ತನಗೆ ಎಲ್ಲಾ ಶಿಕ್ಷಕರು ಮಾತನಾಡುತ್ತಿದ್ದುದರಿಂದ ಗೊತ್ತಾಗಿದ್ದು, ದಿಃ12-01-2018 ರಂದು ಆರೋಪಿ ತನ್ನ ಖಾತೆಗೆ ರೂ.25,000/-ಗಳನ್ನು ಹಾಕಿದ್ದು, ನಂತರ ತನಗೆ ಫೋನ್ ಮಾಡಿ ತನ್ನ ಸಂಬಂಧಿಕರು ತಪ್ಪಾಗಿ ನಿಮ್ಮ ಖಾತೆಗೆ ಹಣ ಹಾಕಿದ್ದು ಮರಳಿ ಕೊಡಿ ಎಂದು ಹೇಳಿದಾಗ ತಾನು 2 ದಿನ ಬಿಟ್ಟು ತೆಗೆದು ಕೊಡುತ್ತೇನೆ ಎಂದು ಹೇಳಿದ್ದೇನೆ ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.16) ಪ್ರಾ.ಸಾ-10– ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ನಂತರ

ಚಾಸಾ-1 ರವರು ತನ್ನ ಖಾತೆಗೆ ಯಾವ ರೀತಿಯಾಗಿ ಹಣ ಬಂದಿದೆ ಎಂದು ಕೇಳಿದ್ದು, ಜಾನಮಟ್ಟಿ, ಕುಲಕರ್ಣಿ ಮತ್ತು ಇನ್ನುಳಿದ ಶಿಕ್ಷಕರ ಖಾತೆಗೆ ಇದೇ ರೀತಿ ಹಣ ಹೋಗಿದೆ ಎಂದು ಹೇಳಿದ್ದಾರೆ. ಆರೋಪಿ ತನ್ನ ಗಳಿಕೆ ರಜೆಯನ್ನು ಮತ್ತೊಬ್ಬರಿಗೆ ಹಾಕಿ ಮತ್ತೊಬ್ಬರ ಗಳಿಕೆ ರಜೆಯನ್ನು ತನಗೆ ಹಾಕಿದ್ದಾನೆ. ತಾನು ತನ್ನ ಖಾತೆಗೆ ಹಾಕಿದಂತಹ ಹಣವನ್ನು ಆರೋಪಿಗೆ ಮರಳಿ ಕೊಟ್ಟಿದ್ದು, ಚಾಸಾ-1 ರವರು ತಮ್ಮ ಕಡೆಯಿಂದ ಪತ್ರವನ್ನು ಲಿಖಿತ ರೂಪದಲ್ಲಿ ಬರೆಸಿಕೊಂಡಿದ್ದಾರೆ ಮತ್ತು ಈ ಕುರಿತು ತಾನು ಪೋಲಿಸರ ಮುಂದೆ ಹೇಳಿಕೆ ನೀಡಿರುವುದಾಗಿ ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.17) ಪ್ರಾ.ಸಾ-11– ಚನ್ನಪ್ಪ ಅಣ್ಣಪ್ಪ ಜಾನಮಟ್ಟಿ, ಸಹಶಿಕ್ಷಕ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿಃ12-01-2018 ರಂದು ಆರೋಪಿ ತನ್ನ ಖಾತೆಗೆ ರೂ.20,000/-ಗಳನ್ನು ಹಾಕಿದ್ದು, ನಂತರ ಆರೋಪಿ ತನ್ನ ಸ್ನೇಹಿತರು ನಿಮ್ಮ ಖಾತೆಗೆ ರೂ.20,000/-ಗಳನ್ನು ಹಾಕಿದ್ದು, ತನ್ನ ತಾಯಿಗೆ ಆರೋಗ್ಯ ಸರಿ ಇಲ್ಲ, ಸದರಿ ಹಣವನ್ನು ತೆಗೆದುಕೊಡಲು ಹೇಳಿದ್ದರಿಂದ, ತಾನು ಹಣವನ್ನು ತೆಗೆದುಕೊಟ್ಟಿದ್ದು, ನಂತರ ಎಲ್ಲಾ ಶಿಕ್ಷಕರು ಚಾಸಾ-1 ರವರ ಕಚೇರಿಗೆ ಹೋಗಿ ಯಾವ ಹಣ ಎಂದು ವಿಚಾರಣೆ ಮಾಡಿದಾಗ, ಸದರಿ ಹಣವನ್ನು ಬೇರೆ ಶಿಕ್ಷಕರ ಗಳಿಕೆ ರಜೆಯ ಹಣ ಮತ್ತು ಬಾಕಿ ಹಣವನ್ನು ಹಾಕಿದ್ದಾರೆಂದು ತಿಳಿಯಿತು ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.18) ಪ್ರಾ.ಸಾ-11- ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ನಂತರ ಚಾಸಾ-1 ರವರ ಕಚೇರಿಯಲ್ಲಿ ದಾಖಲಾತಿಗಳನ್ನು ಪರಿಶೀಲನೆ ಮಾಡಿದಾಗ, ಬಾಕಿ ಹಣವನ್ನು ತೆಗೆದುಕೊಂಡು ಬೇರೆಯವರ ಖಾತೆಗೆ ಆರೋಪಿ ಹಾಕಿದ್ದರು. ಗಳಿಕೆ ರಜೆಯ ಅರ್ಜಿಗಳನ್ನು ಪಡೆದುಕೊಳ್ಳದೇ ಆರೋಪಿ ಹಣವನ್ನು ಶಿಕ್ಷಕರ ಖಾತೆಗೆ ಹಾಕಿದ್ದು , ದಿಃ 03-03-2018 ರಂದು ತಾವೆಲ್ಲರೂ ಮತ್ತು ಚಾಸಾ-1 ರವರು ಸೇರಿ ದೂರನ್ನು ಕೊಟ್ಟಿದ್ದೇವೆ ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.19) ಪ್ರಾ.ಸಾ-12– ನಾರಾಯಣ ರಾಘವೇಂದ್ರ ಕುಲಕರ್ಣಿ, ಸಂಪನ್ಮೂಲ ವ್ಯಕ್ತಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿಃ 26-12-2017 ರಂದು ಆರೋಪಿ ತನಗೆ ಫೋನ್

ಮಾಡಿ ತನ್ನ ತಾಯಿಗೆ ಆರೋಗ್ಯ ಸರಿ ಇಲ್ಲ ಮತ್ತು ತಾನು ಅಯ್ಯಪ್ಪ ಸ್ವಾಮಿ ದೇವಸ್ಥಾನಕ್ಕೆ ಹೋಗುತ್ತಿದ್ದು, ತನ್ನ ಸ್ನೇಹಿತ ನಿಮ್ಮ ಖಾತೆಗೆ ರೂ.30,000/- ಗಳನ್ನು ಹಾಕಿದ್ದಾನೆ, ಅದನ್ನು ಬೇಗೆ ತೆಗೆದುಕೊಟ್ಟರೆ ನನಗೆ ಅನುಕೂಲವಾಗುತ್ತದೆ ಎಂದು ಹೇಳಿದ್ದರಿಂದ, ತಾನು ಆರೋಪಿಗೆ ರೂ.30,000/-ಗಳಿಗೆ ಚೆಕ್ಕನ್ನು ಕೊಟ್ಟಿದ್ದು, ದಿಃ30-12-2017 ರಂದು ಆರೋಪಿ ಸದರಿ ಚೆಕ್ಕನ್ನು ನಗದೀಕರಣಗೊಳಿಸಿಕೊಂಡಿದ್ದಾನೆ ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.20) ಪ್ರಾ.ಸಾ-12– ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ನಂತರ ಚಾಸಾ-1 ರವರು ನಿಮ್ಮ ಬೇಡಿಕೆ ಇಲ್ಲದೇ ನಿಮ್ಮ ಖಾತೆಗೆ ಆರೋಪಿ ಹಣ ಹಾಕಿದ್ದಾನೆಂದು ತನಗೆ ತಿಳಿಸಿದ್ದು, ಎಲ್ಲರೂ ಸೇರಿ ಚಾಸಾ-1 ರವರ ಕಚೇರಿಗೆ ಹೋಗಿದ್ದು, ದಿಃ03-03-2018 ರಂದು ಚಾಸಾ-1 ರವರು ಪ್ರಥಮ ವರ್ತಮಾನ ಹೇಳಿಕೆ ಕೊಟ್ಟಿದ್ದು, ನಂತರ ಪೋಲಿಸರು ತನ್ನನ್ನು ವಿಚಾರಣೆ ಮಾಡಿರುತ್ತಾರೆ. ಗಳಿಕೆ ರಜೆಯ ನಗದೀಕರಣಕ್ಕಾಗಿ ತಾನು ಅರ್ಜಿ ಕೊಡದಿದ್ದರೂ ಸಹ ಗಳಿಕೆ ರಜೆಯ ನಗದೀಕರಣವನ್ನು ಮಾಡಿದ್ದರು, ಈ ರೀತಿ ಸುಮಾರು 10-11 ಶಿಕ್ಷಕರ ಗಳಿಕೆ ರಜೆಯ ನಗದೀಕರಣವನ್ನು ಮಾಡಿದ್ದರು ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.21) ಪ್ರಾ.ಸಾ-13– ವಿಜಯಕುಮಾರ ಬಸಪ್ಪ ವಂದಾಲ, ಪ್ರಭಾರ ಕ್ಷೇತ್ರಶಿಕ್ಷಣಾಧಿಕಾರಿ, ಜಮಖಂಡಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿಃ 29-06-2018 ರಂದು ತಾನು 1) ಆರೋಪಿಗೆ ಸಂಬಂಧಪಟ್ಟ ಕಾರ್ಯದ ಮಾಹಿತಿ, 2)ಆರೋಪಿಯ ನೇಮಕಾತಿಯ ಆದೇಶದ ಪ್ರತಿ, 3) ಸೇವಾ ಪುಸ್ತಕದ ಮೊದಲನೇ ಪುಟ, 4) ಆರೋಪಿಯ ಕೈಬರಹದ ನಕಲು ಪ್ರತಿಗಳು, 5) ಡಿಸೆಂಬರ್-2017 ಮತ್ತು ಜನವರಿ-2018 ರಲ್ಲಿ ಆರೋಪಿ ಸಹಿ ಮಾಡಿದಂತಹ ಸಿಬ್ಬಂದಿಯವರ ಹಾಜರಾತಿ ಪುಸ್ತಕದ ನಕಲನ್ನು 6) ಬಿ.ಇ.ಓ ಕಚೇರಿಗೆ ಸಂಬಂಧಪಟ್ಟಂತಹ ಪಾಸಪುಸ್ತಕದ ನಕಲನ್ನು ಪಿಎಸ್ಐರವರಿಗೆ ಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.22) ಪ್ರಾ.ಸಾ-14– ಕಾರ್ತಿಕೇಯನ್ ಸಿ. ಚಿನ್ನಯ್ಯನ್, ಮ್ಯಾನೇಜರ್, ಎಸ್‌ಬಿಐ, ಜಮಖಂಡಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ಈ ಕೇಸಿಗೆ ಸಂಬಂಧಪಟ್ಟಂತೆ ಟ್ರೆಜರಿ ಕಚೇರಿಯಿಂದ ಮಂಜೂರಾತಿಯಾದ ಎರಡು ಚೆಕ್ಕುಗಳು ತಮ್ಮ ಬ್ಯಾಂಕಿಗೆ ನಗದೀಕರಣಕ್ಕಾಗಿ ಬಂದಿದ್ದು, ಅದರೊಂದಿಗೆ ಇದ್ದ ಪಟ್ಟಿಯ ಪ್ರಕಾರ ತಾನು ಅವರವರ ಹೆಸರಿಗೆ ಹಣ ಜಮೆ ಮಾಡಿದ್ದು, ತಾನು ಪೋಲಿಸರಿಗೆ ಎರಡು ಚಲನಗಳನ್ನು ಮತ್ತು ಯಾವ ತಾರೀಖಿನಂದು ಖಾತೆಗೆ ಹಣ ಜಮಾ ಮಾಡಿದ್ದೇವೆ ಎಂದು ತೋರಿಸುವ 11 ಸ್ಟೇಟಮೆಂಟನ್ನು ಕೊಟ್ಟಿರುವುದಾಗಿ ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.23) ಪ್ರಾ.ಸಾ-15– ಸಿದ್ದಲಿಂಗಯ್ಯ ಶಿವಯ್ಯ ಹಿರೇಮಠ, ಅಪರಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ಆರೋಪಿಯಾದ ನಿಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು, ನೀವು ಹಣ ದುರುಪಯೋಗಪಡಿಸಿಕೊಂಡು ಮೋಸ ಮಾಡಿ, ಖೊಟ್ಟಿ ಪ್ರಮಾಣ ಪತ್ರಗಳನ್ನು ತಯಾರಿಸಿದ್ದರ ಕುರಿತಂತೆ ದೋಷಾರೋಪಣಾ ಪಟ್ಟಿ ಸಲ್ಲಿಸಲು ತಾನು ದಿಃ 07-09-2019 ರಂದು ಆರಕ್ಷಕ ಉಪನಿರೀಕ್ಷಕರು, ನಗರ ಠಾಣೆ ಜಮಖಂಡಿ ಇವರಿಗೆ ಅನುಮತಿ ನೀಡಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.24) ಪ್ರಾ.ಸಾ-16– ನಾನಾಸಾಹೇಬ ಯಮನಪ್ಪ ಬಸರೀಗಿಡದ, ಕಾರ್ಯನಿರ್ವಾಹಕ ಅಧಿಕಾರಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿಃ 06-07-2018 ರಂದು ತಾನು ಟ್ರೆಜರಿಯಿಂದ ಮಂಜೂರಾಗಿದ್ದ ಡಿಸೆಂಬರ್-2017 ಮತ್ತು ಜನವರಿ-2018 ರ ಗಳಿಕೆ ರಜೆಯ ನಗದೀಕರಣ ಮತ್ತು ಸಂಬಳದ 2 ಟೋಕನ್ ಜೊತೆಗೆ 2 ಬಿಲ್ಲುಗಳನ್ನು ಪತ್ರದೊಂದಿಗೆ ಪೋಲಿಸರಿಗೆ ಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.25) ಪ್ರಾ.ಸಾ-17– ವಿವೇಕಸಿಂಗ್ ರಾಮರೂಪ್‌ಪ್ರಸಾದ ಮರಕಾಮ್, ಗುಮಾಸ್ತ, ಎಸ್‌ಬಿಐ, ಜಮಖಂಡಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ತಾನು ಪೋಲಿಸ

ಠಾಣೆಯಿಂದ ಪತ್ರ ಬಂದ ಮೇರೆಗೆ 2 ಚೆಕ್ಕುಗಳು ಮತ್ತು ಸಂಬಳದ ಬಗ್ಗೆ ವಿವರಣೆ ಮತ್ತು ತಮ್ಮ ಶಾಖೆಯಲ್ಲಿ ನಗದೀಕರಣಗೊಂಡ ಆರೋಪಿಯ ಖಾತೆಗೆ ಸಂಬಂಧಪಟ್ಟಂತಹ ಸ್ಟೇಟಮೆಂಟನ್ನು ಪೋಲಿಸರಿಗೆ ಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.26) ಪ್ರಾ.ಸಾ-18– ರಾಜು ನಾಗಪ್ಪ ಸಿಂಗೆ, ಮುಖ್ಯಪೇದೆ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿಃ 29-06-2018 ರಂದು ಚಾಸಾ-25 ರವರ ಆದೇಶದಂತೆ ತಾನು ಮತ್ತು ಪಿಸಿ ನಂ.1119 ರವರು ಸೇರಿ ವಿಜಯಪುರದ ಸ್ವತಂತ್ರ ಯೋಧರ ಕಾಲೋನಿಯಲ್ಲಿರುವ ಮನೆಯಲ್ಲಿ ಆರೋಪಿಯಾದ ನಿಮ್ಮನ್ನು ದಸ್ತಗಿರಿ ಮಾಡಿ ಚಾಸಾ-25 ರವರ ಮುಂದೆ ಹಾಜರುಪಡಿಸಿ ವರದಿ ಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.27) ಪ್ರಾ.ಸಾ-19– ಗೋವಿಂದಗೌಡ ಶಿವನಗೌಡ ಪಾಟೀಲ, ಪಿಎಸ್ಐ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ತಾನು ದಿಃ 20-10-2019 ರಂದು ಈ ಕೇಸಿನ ಮುಂದಿನ ತನಿಖೆಯನ್ನು ಚಾಸಾ-24 ರವರಿಂದ ವಹಿಸಿಕೊಂಡು, ದಿಃ 04-09-2020 ರಂದು ಎಸ್‌ಬಿಐ ಬ್ಯಾಂಕಿನ ಮ್ಯಾನೇಜರ್ ಇವರಿಂದ ಈ ಕೇಸಿಗೆ ಸಂಬಂಧಪಟ್ಟಂತಹ 20 ಪುಟಗಳ ಬ್ಯಾಂಕ್ ಸ್ಟೇಟಮೆಂಟನ್ನು ಪಡೆದು, ಚಾಸಾ-1 ರವರ ಮರುಹೇಳಿಕೆ ಪಡೆದಿರುತ್ತಾರೆ. ನಂತರ ಆರೋಪಿಯಾದ ನಿಮ್ಮ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ನ್ಯಾಯಾಲಯಕ್ಕೆ ನಿಮ್ಮ ಮೇಲೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.28) ಪ್ರಾ.ಸಾ-20– ಪರಶುರಾಮ ನಿಂಗಪ್ಪ ಮನಗೂಳಿ, ಪಿಎಸ್ಐ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ತಾನು ದಿಃ 03-03-2018 ರಂದು ಚಾಸಾ-1 ರವರು ನೀಡಿದ ಪ್ರಥಮ ವರ್ತಮಾನ ಹೇಳಿಕೆಯನ್ನು ನಮ್ಮ ಠಾಣೆಯ ಪ್ರಕರಣ ಸಂಖ್ಯೆಃ 37/2018 ರಲ್ಲಿ ದಾಖಲಿಸಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ

ಕಳುಹಿಸಿಕೊಟ್ಟಿರುತ್ತಾರೆ. ದಿಃ15-03-2018 ರಂದು ಚಾಸಾ-4 ರವರು ತೋರಿಸಿದ ಜಾಗೆಯಲ್ಲಿ ಪಂಚರ ಸಮಕ್ಷಮ ಸ್ಥಳಮಹಜರ ಮಾಡಿ, ಚಾಸಾ-6 ರಿಂದ ಚಾಸಾ-15 ರವರ ಹೇಳಿಕೆಗಳನ್ನು ಪಡೆದಿರುತ್ತಾರೆ. ದಿಃ23-03-2018 ರಂದು ಚಾಸಾ-6 ರಿಂದ ಚಾಸಾ-15 ರವರ ಖಾತೆಗೆ ಸಂಬಂಧಪಟ್ಟಂತಹ ಸ್ಟೇಟಮೆಂಟನ್ನು ಚಾಸಾ-1 ರವರಿಂದ ಪಡೆದಿದ್ದು, ದಿಃ 28-06-2018 ರಂದು ಚಾಸಾ-1 ರವರ ಮರುಹೇಳಿಕೆ ಮತ್ತು ದಿಃ 29-06-2018 ರಂದು ಚಾಸಾ-4 ರವರ ಹೇಳಿಕೆ ಪಡೆದಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.29) ಪ್ರಾ.ಸಾ-20– ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ಅದೇ ದಿನ ಚಾಸಾ-22 ಮತ್ತು ಪಿಸಿ 1119 ರವರು ಆರೋಪಿಯನ್ನು ತನ್ನ ಮುಂದೆ ಹಾಜರುಪಡಿಸಿದ್ದರಿಂದ, ತಾನು ದಸ್ತಗಿರಿ ಕ್ರಮ ಅನುಸರಿಸಿ ಆರೋಪಿಯ ಮಾದರಿ ಸಹಿಗಳನ್ನು ಪಡೆದು ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ದಿಃ30-06-2018 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಿಂದ ಆರೋಪಿಗೆ ಸಂಬಂಧಪಟ್ಟಂತಹ ಕರ್ತವ್ಯದ ವಿವರದ ಪತ್ರ, ನೇಮಕಾತಿ ಆದೇಶದ ದೃಢೀಕೃತ ನಕಲು, ಸೇವಾ ಪುಸ್ತಕದ ಒಂದು ಪುಟದ ದೃಢೀಕೃತ ನಕಲು, ಹಾಜರಾತಿ ಪುಸ್ತಕದ 2 ಪುಟಗಳ ದೃಢೀಕೃತ ನಕಲು, ಆರೋಪಿಯ ಕೈಬರಹದ 3 ಪುಟಗ ಳ ದೃಢೀಕೃತ ನಕಲು, ಪಾಸ ಪುಸ್ತಕದ 3 ಪುಟಗಳ ದೃಢೀಕೃತ ನಕಲು ಮತ್ತು 2 ಚಲನಗಳನ್ನು ಪಡೆದಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.30) ಪ್ರಾ.ಸಾ-20– ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ದಿಃ 03-07-2018 ರಂದು ಪಿಸಿ 1567 ರವರು ಹಾಜಪಡಿಸಿದ ಟೋಕನ್ ನಂಬರಿಗೆ ಸಂಬಂಧಪಟ್ಟ ಬಿಲ್ಲು ಮತ್ತು ಚೀಟಿಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿದ್ದಾರೆ. ದಿಃ 02-07-2018 ರಂದು ಉಪಖಜಾನೆಯವರು ಬರೆದ ಪತ್ರವನ್ನು ಪಡೆದಿದ್ದು, ದಿಃ 07-09-2018 ರಂದು ತನಗೆ ವರ್ಗಾವಣೆಯಾಗಿದ್ದರಿಂದ ಚಾಸಾ-24 ರವರಿಗೆ ಪ್ರಕರಣದ ಮುಂದಿನ ತನಿಖೆಯನ್ನು

ವಹಿಸಿಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.31) ಪ್ರಾ.ಸಾ-21– ದಿನೇಶ ಪಾಂಡುರಂಗ ಜವಳಕರ, ಪಿಎಸ್ಐ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ತಾನು ದಿಃ 07-09-2018 ರಂದು ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-23 ರವರಿಂದ ವಹಿಸಿಕೊಂಡು, ದಿಃ 08-10-2018 ರಂದು ಚಾಸಾ-1 ರವರಿಂದ ವೇತನ ಬಡ್ತಿ ಪುರವಣಿ ಮತ್ತು ವೇತನ ವಿತರಣಾ ಪಟ್ಟಿಯನ್ನು ಪಡೆದಿರುತ್ತಾರೆ. ದಿಃ 03-07-2019 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಇವರು ಆರೋಪಿಯ ವಿರುದ್ಧ ಶಿಸ್ತುಕ್ರಮ ತೆಗೆದುಕೊಂಡು ಅಮಾನತ್ತುಪಡಿಸಿದ್ದರ ಆದೇಶದ ಪ್ರತಿಯನ್ನು ಸ್ವೀಕರಿಸಿದ್ದು, ದಿಃ 16-08-2019 ರಂದು ಸಹ ನಿರ್ದೇಶಕರು, ಆಯುಕ್ತರು ಶಿಕ್ಷಣ ಇಲಾಖೆ ಇವರಿಗೆ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಅನುಮತಿ ಕೋರಿ ಪತ್ರ ಬರೆದಿದ್ದು, ಸದರಿಯವರಿಂದ ದಿಃ 11-09-2019 ರಂದು ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಅನುಮತಿ ಪಡೆದಿರುತ್ತಾರೆ. ದಿಃ 10-10-2019 ರಂದು ತನಗೆ ವರ್ಗಾವಣೆಯಾಗಿದ್ದರಿಂದ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-20 ರವರಿಗೆ ವಹಿಸಿರುವುದಾಗಿ ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ:- ಸುಳ್ಳು

ಪ್ರ.32) ಈ ಪ್ರಕರಣದ ಕುರಿತು ನಿಮಗೆ ಇನ್ನೇನಾದರೂ ಹೇಳುವುದು ಇದೆಯಾ?

ಉಃ- ಇಲ್ಲ.

ಪ್ರ.33) ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆಯನ್ನು ಮಾಡಿಸುವಿರಾ ?

ಉಃ- ಸಾಕ್ಷಿ ಮಾಡಿಸುತ್ತೇನೆ.

(ಆರೋಪಿಯ ಹೇಳಿಕೆಯನ್ನು ನನ್ನ ಸ್ವ-ಹಸ್ತಾಕ್ಷರದಿಂದ ತೆರೆದ ನ್ಯಾಯಾಲಯದಲ್ಲಿ ಪಡೆದಿರುತ್ತೇನೆ )

ಸ್ಥಳ - ಜಮಖಂಡಿ
ದಿನಾಂಕಃ 27-07-2024

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಜಮಖಂಡಿ.